**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.**

ಸಿಸಿ ನಂಃ 373/2025

ಸಿ ಡಬ್ಲುಃ 1

ಪಿ ಡಬ್ಲುಃ 1

| | |
|---|---|
| ಸಾಕ್ಷಿದಾರರ ಹೆಸರು | ಮಂಜು |
| ತಂದೆಯ ಹೆಸರು | ನಾಗಪ್ಪ ಗೌಡ |
| ವಯಸ್ಸು | 63 |
| ಉದ್ಯೋಗ | ರೈತಾಪಿ |
| ವಾಸ್ತವ್ಯ | ಕೆಳಗಿನೂರು |

ಸಾಕ್ಷಿಯನ್ನು ದಿನಾಂಕ **09-10-2025** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಸ.ಸ.ಅಭಿಯೋಜಕ ರವರಿಂದಃ**

ನನಗೆ ಆರೋಪಿತರ ಪರಿಚಯ ಇದೆ. ಅವರು ನಮ್ಮ ಪಕ್ಕದ ಮನೆಯವರು. ಹಳ್ಳಕುಳಿಯಿಂದ ನಾಜಗಾರಕ್ಕೆ ಹೋಗುವ ಸಾರ್ವಜನಿಕ ರಸ್ತೆಯನ್ನು ಕಲ್ಲು ಕಟ್ಟಿ ಹಾಗೂ ಮುಳ್ಳು ಹಾಕಿ ಬಂದ್ ಮಾಡಿದ್ದರು. ನಾನು, ಸಾರ್ವಜನಿಕರು ಸೇರಿ ದಾರಿ ಯಾಕೆ ಬಂದ್ ಮಾಡಿದ್ದೀರಿ ಎಂದು ಕೇಳಲು ಹೋದಾಗ ಆರೋಪಿತರು ಅದು ನಮ್ಮ ಮಾಲ್ಕಿ ಜಾಗ ಅದನ್ನು ಕೇಳಲು ನೀವ್ಯಾರು ಎಂದು ಹೇಳಿದರು. ದಿಃ 08-01-2025 ರಂದು ಬೆಳಗ್ಗೆ 9-45 ಗಂಟೆಗೆ ನಾನು ಮನೆಯಿಂದ ಹೈವೆಗೆ ಹೋದಾಗ ಅಲ್ಲಿಗೆ ಬಂದ ಆರೋಪಿತರು ನನ್ನನ್ನು ಉದ್ದೇಶಿಸಿ ಬೋಳಿಮಗ, ಸೂಳೆಮಗ ಎಂದು ಅವಾಚ್ಯವಾಗಿ ಬೈದಿರುತ್ತಾರೆ. ಆ ಸಮಯಕ್ಕೆ ಚಾಸಾ4 ರಿಂದ 6 ರವರು ಜಗಳವನ್ನು ತಪ್ಪಿಸಿದ್ದು ಇರುತ್ತದೆ. ನಂತರ ನಾನು ಮಂಕಿ ಠಾಣೆಗೆ ಹೋಗಿ ಈ ಬಗ್ಗೆ ದೂರನ್ನು ನೀಡಿರುತ್ತೇನೆ. ತದನಂತರ ಮಾನ್ಯ ನ್ಯಾಯಾಲಯ ಅನುಮತಿಗಾಗಿ ಕಳುಹಿಸಿದ್ದು, ದಿಃ 10-01-2025 ರಂದು ನ್ಯಾಯಾಲಯದ ಅನುಮತಿ ಪಡೆದು ಠಾಣೆಗೆ ನೀಡಿದ್ದು, ಆ ಪ್ರಕಾರ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ಸಾಕ್ಷಿಯು ದೂರನ್ನು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು **ನಿಪಿ.1** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಠಾಣೆಯಲ್ಲಿ ನೀಡಿದ ಎನ್ ಸಿ ಸ್ವೀಕೃತಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.2(ಎ)** ಎಂದು ಗುರುತಿಸಲಾಯಿತು. ನಂತರ ದಿಃ 11-01-2025 ರಂದು ಪೊಲೀಸರು ಸ್ಥಳ ಪಂಚನಾಮೆಗೆ ಬಂದಿದ್ದರು. ಆ ಸಮಯಕ್ಕೆ ಪೊಲೀಸರು ಚಾಸಾ2 ಮತ್ತು 3 ರವರನ್ನು ಪಂಚರಾಗಿ ಕರೆದಿದ್ದು, ಸ್ಥಳವನ್ನು ನಾನು ತೋರಿಸಿದಂತೆ

ಸ್ಥಳದಲ್ಲಿ ಪಂಚನಾಮೆಯನ್ನು ಬೆಳಗ್ಗೆ 11-30 ಯಿಂದ 12-30 ವರೆಗೆ ಮಾಡಿ ನಮ್ಮ ಸಹಿ ಪಡೆದರು. ಆ ಕಾಲಕ್ಕೆ ಭಾವಚಿತ್ರವನ್ನು ಸಹ ತೆಗೆದಿರುತ್ತಾರೆ. ಸಾಕ್ಷಿಯು ಪಂಚನಾಮೆಯನ್ನು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು **ನಿಪಿ.3** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.3(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಭಾವಚಿತ್ರವನ್ನು **ನಿಪಿ.4** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ. ವಿ ಆರ್ ಎನ್., ವಕೀಲರಿಂದಃ**

ಆರೋಪಿತರು ನನ್ನ ಮೇಲೆ 2023 ರಲ್ಲಿ ದಾವ ಹಾಕಿರುತ್ತಾರೆ. ದಾವಾ ಹಾಕಿದ ನಂತರ ಉದಾಹರಣೆಯನ್ನು ಅವಧಿಯೊಳಗೆ ಹಾಕಿದ್ದು ಇರುವುದಿಲ್ಲ. ಎಷ್ಟು ಸಮಯದ ನಂತರ ಹಾಕಿದ್ದೇನೆ ಎಂದು ನೆನಪಿಲ್ಲ. ನ್ಯಾಯಾಲಯ ನಮಗೆ ತಡವಾಗಿ ಹಾಕಿದ್ದಕ್ಕೆ ದಂಡ ಹಾಕಿದೆ. ಆರೋಪಿತರು ತಮ್ಮ ಜಾಗದಲ್ಲಿ ಹೊಸದಾಗಿ ರಸ್ತೆ ಮಾಡಬಾರದೆಂದು ದಾವೆ ಹಾಕಿದರು. ಆ ದಾವಾಸ್ತಿಯ ಸ.ನಂ.378. ನಾವು ಹೇಳಿದ ಈ ರಸ್ತೆಯು ಆರೋಪಿಗೆ ಸಂಬಂಧಪಟ್ಟ ಸ.ನಂ.378 ರಲ್ಲಿ ಬರುವುದಿಲ್ಲ. ನಾನು ಈ ರೀತಿ ನನ್ನ ಉದಾಹರಣೆಯಲ್ಲಿ ಬರೆಸಿದ್ದು ನೆನಪಿಲ್ಲ. ನನಗೆ ಆವಾಗ ನಕಾಶೆ ಸಿಕ್ಕಿದ್ದು ಇರುವುದಿಲ್ಲ. ಆರೋಪಿತರು ನನ್ನ ಮೇಲೆ ಇದೇ ರಸ್ತೆಯಲ್ಲಿರುವ ಪಾಗಾರು ಕಿತ್ತ ಬಗ್ಗೆ ನನ್ನ ಮೇಲೆ ಹಾಗೂ 23 ಜನರ ಮೇಲೆ ಫಿರ್ಯಾದನ್ನು ಕೊಟ್ಟಿದ್ದರು ಎಂದರೆ ಸರಿ. ಪೊಲೀಸರು ಅದಕ್ಕೆ ಸಂಬಂಧಪಟ್ಟಂತೆ ಚಾರ್ಜಶೀಟ್ ಹಾಕಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ನಾನು ನ್ಯಾಯಾಲಯಕ್ಕೆ ಬರುತ್ತಿದ್ದೇನೆ. ಹಾಗೂ ಆರೋಪಿತರು ನನ್ನ ಮೇಲೆ ಮತ್ತೊಂದು ಫಿರ್ಯಾದಿ ನಾನು ಮತ್ತು 12 ಜನ ಸೇರಿ ಅವರ ಮನೆಗೆ ಹೋಗಿ ಗಲಾಟೆ ಮಾಡಿದ್ದರ ಬಗ್ಗೆ ಫಿರ್ಯಾದಿ ಹಾಕಿದ್ದಾರೆ. ಅದು ಕೂಡ ನಡೆಯುತ್ತಿದೆ. ಇವೆಲ್ಲ ಆದದ್ದು 2023-24 ನೇ ಇಸ್ವಿಯಲ್ಲಿ. ಈ ಜಾಗಕ್ಕೆ ಸಂಬಂಧಪಟ್ಟಂತೆ ಈ ಜಾಗಕ್ಕೆ ಹೋಗಬಾರದು, ಪಾಗಾರು ಕೀಳಬಾರದು ಎಂದು ಆದೇಶವಾಗಿದೆ ಎಂದರೆ ಸರಿ. ನಾನು ಪೊಲೀಸ್ ಠಾಣೆಗೆ ನಮ್ಮೂರಿನ ಸಾರ್ವಜನಿಕರವನ್ನು ಕರೆದುಕೊಂಡು ಹೋಗುವ ರೂಢಿ ಇಲ್ಲ. ನಾನು ದಿಃ 08-01-2025 ರಂದು ಠಾಣೆಗೆ ಸಾರ್ವಜನಿಕರು ಎಲ್ಲಾ ಸೇರಿಕೊಂಡು ಹೋಗಿದ್ದೆವು. ನಮ್ಮ ಮನೆಯಿಂದ ಹೈವೆಗೆ ಹೋಗುವುದಿದ್ದರೆ ಆರೋಪಿತರ ಮನೆಯನ್ನು ದಾಟಿ ಹೋಗಬೇಕೆಂದು ಇಲ್ಲ. ಆ ದಿವಸ ಠಾಣೆಗೆ ಹೋಗುವಾಗ ಚಾಸಾ5 ಮತ್ತು 6 ನನ್ನೊಂದಿಗೆ ಇದ್ದರು. ಆ ದಿವಸ ಆರೋಪಿತರು ಅವರ ಅಂಗಡಿಯಿಂದ ನಮ್ಮ ಮನೆಯ ದಾರಿಗೆ ಬರುತ್ತಿದ್ದರು. ನನ್ನ ಎದುರುಗಡೆ ಬಂದರು. ಚಾಸಾ5 ಮತ್ತು 6 ಬೈಕಿನಲ್ಲಿ ಬಂದು ಅಲ್ಲಿ ನಿಂತುಕೊಂಡಿದ್ದರು. ನನಗೆ ಮೊದಲು ಯಾರು ಬೈದರು ಎಂದು ಗೊತ್ತಾಗಲಿಲ್ಲ. ಆರೋಪಿತರು ನನ್ನ ಹೆಸರನ್ನು ಕರೆದದ್ದು ಇರುವುದಿಲ್ಲ. ನನಗೆ 2 ನೇ ಆರೋಪಿ ಬೋಳಿಮಗ ಮಂಜು ಬಾ ಎಂದು ಬೈದರು. ಆರೋಪಿತರು ನನ್ನನ್ನು ಅಡ್ಡಗಟ್ಟಿದ್ದು ಇರುವುದಿಲ್ಲ. ಚಾಸಾ5 ಮತ್ತು 6 ನಮ್ಮಿಂದ 5 ಫೂಟ್ ದೂರದಲ್ಲಿ ಇದ್ದರು. ಚಾಸಾ5 ಮತ್ತು 6 ಆರೋಪಿತರ ಗೌಜು ಕೇಳಿ ನನ್ನ ಹತ್ತಿರ ಬಂದದ್ದು ಇರುವುದಿಲ್ಲ. ಅಲ್ಲೇ ನೋಡುತ್ತಾ ನಿಂತರು. ನನ್ನ ಮಗ ಬಂದು ಜಗಳ ಮಾಡಬೇಡಿ ಮನೆಗೆ ಹೋಗಿ ಎಂದ. ನಾನು ಅಲ್ಲಿಂದ ಸೀದಾ ಠಾಣೆಗೆ ಹೋದೆ. ನನ್ನ ಮಗ ನಮ್ಮ ಜೊತೆ ಹೈವೆಗೆ ಹೋಗಿಲ್ಲ. ಚಾಸಾ5 ಮತ್ತು 6 ಏನೂ ಮಾತಾಡಿದ್ದು ಇರುವುದಿಲ್ಲ. ನನ್ನನ್ನು ಕರೆದುಕೊಂಡು ಠಾಣೆಗೆ ಹೋಗೋಣ ಬನ್ನಿ ಎಂದು ಹೇಳಿದರು. ದೂರನ್ನು ಯಾರು ಬರೆದರು ಎಂದು ನೆನಪಿಲ್ಲ. ನಾನು

ಫಿರ್ಯಾದನ್ನು ಬರೆಯಲು ಮಾಹಿತಿ ಕೊಟ್ಟಿರುತ್ತೇನೆ. ನಾವು ಪೊಲೀಸ್ ಫಿರ್ಯಾದನ್ನು ಪೊಲೀಸ್ ಠಾಣೆ ಹಿಂದೆ ಬರೆದಿದ್ದೇವೆ. ಆ ದಿವಸ ತುಂಬಾ ಮಂದಿ ಇದ್ದರು. ಫಿರ್ಯಾದನ್ನು ಬರೆಯಲು ನಾನೊಬ್ಬನೇ ಮಾಹಿತಿ ಕೊಟ್ಟಿರುತ್ತೇನೆ. ಪೊಲೀಸರಿಗೆ ಪಂಚನಾಮೆಯ ಸ್ಥಳವನ್ನು ಹೊನ್ನಾವರದಿಂದ ಭಟ್ಕಳಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿಯ ಕೆಳಬದಿಯಲ್ಲಿ ದಕ್ಷಿಣ ಮುಖಕ್ಕೆ ತೋರಿಸಿದ್ದೇನೆ. ಆರೋಪಿತರ ಅಂಗಡಿ ಘಟನಾ ಸ್ಥಳದಿಂದ 60-70 ಫೂಟ್ ಅಂತರದಲ್ಲಿ ಇದೆ. ಘಟನಾ ಸ್ಥಳ ಹೈವೆ ಅಂಚಿನಿಂದ 10 ಫೂಟ್ ದೂರ ತೋರಿಸಿದ್ದೇನೆ. ನಮ್ಮ ಮುಂದೆ ಪೊಲೀಸರು ಯಾವುದೇ ಜಾಗದ ಅಳತೆ ಮಾಡಿದ್ದು ಇರುವುದಿಲ್ಲ. ಪೊಲೀಸರು ಯಾವುದೇ ನಕಾಶೆ ಮಾಡಿರುವುದಿಲ್ಲ. ಪಂಚನಾಮೆಯನ್ನು ಪೊಲೀಸರೇ ಬರೆದಿದ್ದಾರೆ. ನಾನು ಪಂಚನಾಮೆಯನ್ನು ಓದಿದ್ದೇನೆ. ನಾನು ಬರೆದ ಪಂಚನಾಮೆಗೆ ಸಹಿ ಹಾಕಿರುತ್ತೇನೆ. ಲ್ಯಾಪ್ ಟಾಪ್ ನಲ್ಲಿ ಏನು ಮಾಡಿದರು ಗೊತ್ತಿಲ್ಲ. ಪಂಚನಾಮೆಯಲ್ಲಿರುವ ಚತುರ್ಗಡಿ ಬಗ್ಗೆ ನಾನೇ ಮಾಹಿತಿ ನೀಡಿದ್ದೇನೆ. ಪಂಚನಾಮೆ ಪ್ರಿಂಟರ್ ಬಗ್ಗೆ ಹೇಳಿದ್ದು ಇರುವುದಿಲ್ಲ. ಆ ದಿವಸ ಯಾವುದೆ ಘಟನೆ ನಡಿಯದೇ ಇದ್ದರೂ ನಾನು ಆರೋಪಿತರ ಕಾಂಪೋಂಡನ್ನು ಕಿತ್ತು ಹೊಸದಾಗಿ ರಸ್ತೆ ನಿರ್ಮಿಸಲು ಅವರಿಗೆ ಹೆದರಿಸಲು ಅವರಿಗೆ ಸುಳ್ಳು ಫಿರ್ಯಾದನ್ನು ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

-Sd-

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.**

ಸಿಸಿ ನಂಃ 373/2025

ಸಿ ಡಬ್ಲುಃ 2

ಪಿ ಡಬ್ಲುಃ 2

| | |
|---|---|
| ಸಾಕ್ಷಿದಾರರ ಹೆಸರು | ಅಶೋಕ |
| ತಂದೆಯ ಹೆಸರು | ಹೊನ್ನಪ್ಪ ನಾಯ್ಕ |
| ವಯಸ್ಸು | 50 |
| ಉದ್ಯೋಗ | ರೈತಾಪಿ |
| ವಾಸ್ತವ್ಯ | ಕೆಳಗಿನೂರು |

ಸಾಕ್ಷಿಯನ್ನು ದಿನಾಂಕ **09-10-2025** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಸ.ಸ.ಅಭಿಯೋಜಕ ರವರಿಂದಃ**

ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ, ಸಾಕ್ಷಿಯು ಪಂಚನಾಮೆಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ.3(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ4 ಭಾವಚಿತ್ರದಲ್ಲಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ. ಇದನ್ನು ದಿಃ 11-01-2025 ರಂದು ಪೊಲೀಸರು ಘಟನಾ ಸ್ಥಳದ ಪಂಚನಾಮೆಗೆ ಬಂದಿದ್ದು, ಆ ಸಮಯದಲ್ಲಿ ನಾನು ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದು ಚಾಸಾ1 ರವರು ಪೋಲೀಸರನ್ನು ಅಲ್ಲಿಗೆ ಕರೆತಂದಿರುತ್ತಾರೆ. ಪೊಲೀಸರು ನಮ್ಮನ್ನು ಘಟನಾ ಸ್ಥಳದಲ್ಲಿ ಪಂಚನಾಮೆಯ ಕಾಲಕ್ಕೆ ಪಂಚರಾಗಿ ಬರುವಂತೆ ಕರೆದಿರುತ್ತಾರೆ. ನನ್ನನ್ನು ಹಾಗೂ ಚಾಸಾ3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡಿರುತ್ತಾರೆ. ಚಾಸಾ1 ಮತ್ತು ಆರೋಪಿತರ ನಡುವೆ ಆದ ಗಲಾಟೆಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆಗೆ ಬಂದಿದ್ದು, ಚಾಸಾ1 ರವರು ತೋರಿಸಿದ ಸ್ಥಳದಲ್ಲಿ ನಿಪಿ3 ರಂತೆ ಪಂಚನಾಮೆಯನ್ನು 11-30 ಯಿಂದ 12-30 ವರೆಗೆ ವಿವರವಾದ ಪಂಚನಾಮೆಯನ್ನು ತಯಾರಿಸಿ ನಿಪಿ4 ರಂತೆ ಫೋಟೋವನ್ನು ತೆಗೆದು ನನ್ನ ಸಹಿಯನ್ನು ಪಡೆದಿರುತ್ತಾರೆ.

**ಪಾಟೀ ಸವಾಲುಃ ಶ್ರೀ. ವಿ ಆರ್ ಎನ್., ವಕೀಲರಿಂದಃ**

ಆರೋಪಿತರು ದಾಖಲಿಸಿದ 3 ಕ್ರಿಮಿನಲ್ ಪ್ರಕರಣದಲ್ಲಿ ನಾನು ಆರೋಪಿ. ಆರೋಪಿತರು ದಾಖಲಿಸಿದ ದಾವೆಯಲ್ಲಿ ನಾನು ಪ್ರತಿವಾದಿ ಎಂದರೆ ಸರಿ. ನಮ್ಮ ಗದ್ದೆ ಇರುವುದು ರಾಷ್ಟ್ರೀಯ ಹೆದ್ದಾರಿಯಿಂದ 100 ಮಿ.

ಪಿ ಡಬ್ಲುಃ 2

ದೂರದಲ್ಲಿ. ಎ ಎಸ್ ಐ ರವರು ನನ್ನನ್ನು ಕರೆಯಲು 100 ಮೀ. ದೂರದಲ್ಲಿರುವ ಗದ್ದೆಗೆ ಹೋಗಿದ್ದರು. ಘಟನೆ ನಡೆದ ಸುತ್ತಾಮುತ್ತ ಬಹಳಷ್ಟು ಅಂಗಡಿ ಇದೆ. ಅವರನ್ನು ಕರೆಯಲಿಲ್ಲ. ಪೊಲೀಸರು ಮತ್ತು ಫಿರ್ಯಾದಿ ನನ್ನನ್ನು ಕರೆದರು. ಪೊಲೀಸರು ನಾನು ಹೇಳಿದಂತೆ ಪಂಚನಾಮೆಯನ್ನು ಬರೆದಿದ್ದಾರೆ. ಪೊಲೀಸರಿಗೆ ಇಂತಹ ಜಾಗದಲ್ಲಿ ಗಲಾಟೆಯಾಗಿದೆ ಎಂದು ಹೇಳಿರುತ್ತೇನೆ. ಗಲಾಟೆಯನ್ನು ನಾನು ನೋಡಿಲ್ಲ. ನಾನು ತೋರಿಸಿದ ಸ್ಥಳದಲ್ಲೇ ಪೊಲೀಸರು ಪಂಚನಾಮೆ ಬರೆದರು. ಪಂಚನಾಮೆಗೆ ಮಾಹಿತಿಯನ್ನು ಫಿರ್ಯಾದಿಯವರು ನೀಡಿದರು. ಪಂಚನಾಮೆಯನ್ನು ನಾನು ಓದಿದ್ದೇನೆ. ಪೊಲೀಸರು ಬರೆದಿದ್ದಾರೆ. ಪೊಲೀಸರು ಚೆಕ್ ಬಂದಿಯನ್ನು ಬರೆದಿದ್ದಾರೆ. ನನ್ನ ಮುಂದೆ ಮಂಜು ಗೌಡರವರ ಮನೆಯಿಂದ ಘಟನಾ ಸ್ಥಳದವರೆಗೆ ಅಳತೆ ಮಾಡಿದ್ದಾರೆ. ನನಗೆ ಪಂಚನಾಮೆಯ ವಿಚಾರ ಗೊತ್ತಿಲ್ಲದೇ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

-Sd-

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**
**ಹೊನ್ನಾವರ.**